ನರೀಪುರ ಬಳಿ ಇರುವ ಸೇತುವೆಯ ಪುನರ್ ನಿರ್ಮಾಣ.

1521 - ಶ್ರೀ ಎಂ. ಸಿದ್ಧಮಾದಯ್ಯ (ಕೊಳ್ಳೇಗಾಲ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಳ್ಳೇಗಾಲ ತಾಲ್ಲೂಕಿನ ನರೀಪುರದ ಬಳಿ ಇರುವ ಸೇತುವೆಯು ಬಹಳ ಹಳೆಯದಾಗಿದ್ದು ಶಿಥಿಲಗೊಂಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಈ ಸೇತುವೆಯನ್ನು ಹೊಸದಾಗಿ ಪುನಃ ನಿರ್ಮಿಸಲು ಸರ್ಕಾರದವರು ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಹೌದು, ಭಾಗಶಃ ಶಿಥಿಲಗೊಂಡಿದೆ.

1991-92ನೇ ಸಾಲಿನ ಆಯವ್ಯಯದಲ್ಲಿ ಹೊಸ ಕಾಮಗಾರಿಗಳಿಗಾಗಿ ದೊರಕುವ ಹಣದ ಲಭ್ಯತೆಯನ್ನು ಹಾಗೂ ಪುನರ್ ನಿರ್ಮಾಣಗೊಳ್ಳಬೇಕಾದ ಸೇತುವೆಗಳ ಆದ್ಯತೆಯನ್ನು ಅನುಸರಿಸಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪ್ರಯತ್ನಿಸಲಾಗುವುದು.

ಖಾದಿ ಗ್ರಾಮೋದ್ಯೋಗ ಮಂಡಳಿಯಲ್ಲಿ ಭ್ರಷ್ಟಾಚಾರ

1486 - ಶ್ರೀ ಕೆ.ಲಕ್ಕಪ್ಪ (ಕುಣಿಗಲ್) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾದಿ ಗ್ರಾಮೋದ್ಯೋಗ ಮಂಡಲಿಯಲ್ಲಿ ಭ್ರಷ್ಟಾಚಾರ ಪ್ರಜಾಸತ್ತಾತ್ಮಕ, ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅಲ್ಲಿನ ನಿರ್ವಹಣಾ ಅಧಿಕಾರಿಯ ವಿರುದ್ಧವೇನಾದರೂ ದೂರುಗಳು ಬಂದಿವೆಯೇ? ಹಾಗಿದ್ದಲ್ಲಿ ದೂರುಗಳ ಸ್ವರೂಪವೇನು?

ಇ) ಈ ಬಗ್ಗೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ?

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು)

ಅ) ಹೌದು. ಆದರೆ ಅನಾಮಧೇಯ ಹಾಗೂ ಹುಸಿ ಅರ್ಜಿಗಳು.

ಆ) ಹೌದು. ಅನಾಮಧೇಯ ಹಾಗೂ ಹುಸಿ ಅರ್ಜಿಗಳು. ಭ್ರಷ್ಟಾಚಾರ ಹಾಗೂ ದುರುಪಯೋಗ.

ಇ) ಪರಿಶೀಲಿಸಲಾಗುತ್ತಿದೆ.

ಖಾದಿ ಮಂಡಲಿಯಲ್ಲಿರುವ ಕಾರುಗಳು

1487 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್): ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾದಿ ಮಂಡಲಿಯಲ್ಲಿ ಉಪಯೋಗಿಸುತ್ತಿರುವ ಕಾರುಗಳ ಸಂಖ್ಯೆಗಳೆಷ್ಟು?

ಆ) ಅಧಿಕಾರಿಗಳು ಈ ಕಾರುಗಳನ್ನು ಹೊರಗಡೆ ಬಾಡಿಗೆ ಕೊಟ್ಟು ಅಕ್ರಮ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಬಗ್ಗೆ ಕೈಗೊಳ್ಳುತ್ತಿರುವ ಕ್ರಮವೇನು?

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು)

ಅ) ಮೂರು

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.